



## ನಕ್ಕುಬಿಡಿ

ಡಾಕ್ಟರ್: ಏನ್ರಿ ನಿಶಕ್ತಿಗೆಂದು ತೆಗೆದುಕೊಂಡ ಟಾನಿಕ್ ಇನ್ನೂ ಕುಡಿಯದೆ ಹಾಗೆ ಇಟ್ಟಿದ್ದಿರಲ್ಲಾ?

ರೋಗಿ: ಕ್ಷಮಿಸಿ ಸರ್ ಅದರ ಮುಚ್ಚಳ ತೆಗೆಯಲೂ ಶಕ್ತಿ ಇಲ್ಲ!

★★★

ನ್ಯಾಯಾಧೀಶ: ಬೈಸಿಕಲ್ ಯಾಕೆ ಕದ್ದೆ?

ಅಪರಾಧಿ: ಸ್ಮಶಾನದ ಬಾಗಿಲು ಹತ್ತಿರ ಒಂಟಿಯಾಗಿ ಇತ್ತು. ಅದರ ಮಾಲಿಕ ಸತ್ತು ಹೋಗಿರಬಹುದೆಂದು ಊಹಿಸಿ ಕದ್ದೆ ಸ್ವಾಮಿ.

★★★

ಒಂದು ಸಂಗೀತ ಕಾರ್ಯಕ್ರಮ.

ಹೆಂಡತಿ: ಗಂಡನನ್ನು ತಿವಿದು ಹೇಳಿದಳು 'ಅಲ್ನೋಡಿ ರಂಗಮ್ಮ ಇಲ್ಲಿ ಹೇಗೆ ನಿದ್ದೆ ಮಾಡುತ್ತಿದ್ದಾಳೆ.'

'ಅದನ್ನು ಹೇಳುವುದಕ್ಕೆ ನನ್ನ ಎಬ್ಬಿಸಬೇಕಾ' ಎಂದ ಗಂಡ ಆಕಳಿಸುತ್ತಾ.

★★★

ಜೈಲರ್ ಕೈದಿ ಯೊಬ್ಬನನ್ನು ಕೇಳಿದ

'ನಿನ್ನ ಸಂಬಂಧಿಕರಿಗೆ ನೀನು ಪತ್ರ ಬರೆಯುವುದಿಲ್ಲವೇ?'

ಕೈದಿ: ಇಲ್ಲ, ಅವರೆಲ್ಲ ಇದೇ ಜೈಲಿನಲ್ಲಿ ಇದ್ದಾರೆ ಸಾರ್!

★★★

ಪ್ರಶ್ನೆ: ಮಕ್ಕಳು ಯಾರಿಗೆ ಜಾಸ್ತಿ?

ಉತ್ತರ: ಮೇಸ್ಟ್ರಿಗೆ

ಪ್ರಶ್ನೆ: ಯಾಕೆ?

ಉತ್ತರ: ಅವರಿಗೆ ರಜಾ ಜಾಸ್ತಿ.

★★★

ಒಬ್ಬಳು: ನೆರೆಮನೆ ಶಾರದಮ್ಮ ಪ್ರತಿದಿನ ಬೇರೆ ಬೇರೆ ಸೀರೆ ಉಟ್ಟುಕೊಳ್ಳುತ್ತಾರಲ್ಲಾ ಹೇಗೆ?

ಇನ್ನೊಬ್ಬಳು: ಅವರ ಯಜಮಾನರು ಇದೀಗ ನ್ಯೂ ಸಾರಿ ವಾಶಿಂಗ್ ಕಂಪೆನಿ ತೆಗೆದಿದ್ದಾರೆ.

**(ಸಂಗ್ರಹ) ಮಹಾಂತೇಶ ಎಸ್.ಪಾಟೀಲ, ಹುನಗುಂದ**

ಯಜಮಾನ: ಗಂಡಿನ ಫೋಟೋ ತಂದ್ರಾ?

ಬ್ರೋಕರ್: ಇವನು ಡಾಕ್ಟರ್, ವರದಕ್ಷಿಣೆ ನಾಲ್ಕು ಲಕ್ಷ; ಇವನು ಎಂಜಿನೀಯರ್, ವರದಕ್ಷಿಣೆ ಮೂರು ಲಕ್ಷ; ಇವನು ಸರ್ಕಾರಿ ನೌಕರ, ವರದಕ್ಷಿಣೆ ಎರಡು ಲಕ್ಷ; ಇವನಿಗೆ ಕೆಲಸ ಇಲ್ಲ, ಡಿಗ್ರಿ ಓದಿದ್ದಾನೆ, ವರದಕ್ಷಿಣೆ ಐದು ಲಕ್ಷ.

ಯಜಮಾನ: ಏನೂ, ನಿರುದ್ಯೋಗಿಗೆ ವರದಕ್ಷಿಣೆ ಐದು ಲಕ್ಷನಾ! ಯಾಕೆ?'

ಬ್ರೋಕರ್: ಈ ಸಂಬಂಧದಲ್ಲಿ ಅತ್ತೆ, ನಾದಿನಿಯರ ಕಾಟ ಇಲ್ಲ. ಮನೆಯಲ್ಲಿ ತಂದೆ, ಮಗ ಮಾತ್ರ ಇರೋದು.

★★★

ಸುರೇಶ್: ಇವತ್ತು, ಬಸ್ಸಿನಲ್ಲಿ ಸೀಟಿಗಾಗಿ ಮಧ್ಯ ವಯಸ್ಸಿನ ಹೆಂಗಸರಿಬ್ಬರು ಕಿತ್ತಾಡುತ್ತಿದ್ರು. ನಾನು ಒಂದು ಮಾತು ಹೇಳಿದೆ, ಯಾರು ದೊಡ್ಡೋರೋ, ಯಾರಿಗೆ ಹೆಚ್ಚು ವಯಸ್ಸಾಗಿದೆಯೋ, ಅವರು ಕುಳಿತುಕೊಳ್ಳಿ ಎಂದೆ.

ವೀರೇಶ್: ಯಾರು ಕೂತ್ಕೊಂಡ್ರು?

ಸುರೇಶ್: ಅವರಲ್ಲ, ಬೇರೆ ಯಾವ ಹೆಂಗಸೂ ಆ ಸೀಟಿನಲ್ಲಿ ಕುಳಿತುಕೊಳ್ಳಲಿಲ್ಲ.

**(ಸಂಗ್ರಹ) ಎಂ.ಮಂಜುಳಾ ಸಿದ್ದರಾಜು, ಭದ್ರಾವತಿ**



ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು

ಶ್ರೀ ಚಂದ್ರಶೇಖರ್

ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು

98451 53558

ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಕ್ರಿಶ್ಚಿಯನ್ ಹಾಗು ಮುಸ್ಲಿಂ ಬಾಂಧವರಿಗೆ ಯಂತ್ರ ಮಂತ್ರಗಳ ಸಹಾಯವಿಲ್ಲದೆ ಕಾರ್ಯಸಿದ್ಧಿ ಮಾಡಿಕೊಡಲಾಗುವುದು

ಸ್ತ್ರೀಯರಿಗೆ ವಿಶೇಷ ಪರಿಹಾರ

ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ

ಸ್ತ್ರೀ ಪುರುಷರ ಕಠಿಣ ಸಮಸ್ಯೆಗಳನ್ನು ಗುಪ್ತವಾಗಿರಿಸಿ ಅತೀ ಶೀಘ್ರದಲ್ಲಿ ಪರಿಹಾರ ಮಾಡಿಕೊಡಲಾಗುವುದು

ಖಾಯಂ ಮನೆ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ,
ತಾಂತ್ರಿಕರು ಶ್ರೀ ಚಂದ್ರಶೇಖರ್
ವಿಜಯನಗರ ಮುಖ್ಯ ಬಸ್ ನಿಲ್ದಾಣ, ಇಂದ್ರಪ್ರಸ್ಥ ಹೋಟೆಲ್ ಹತ್ತಿರ, ಪೋಸ್ಟ್ ಆಫೀಸ್ ರೋಡ್, ಬ್ಯಾಂಕ್ ಆಫ್ ಬರೋಡ ಪಕ್ಕ

ವಿಜಯನಗರ, ಬೆಂಗಳೂರು